**ದಿ: 25-06-2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು.**

**ಪಾಟೀಸವಾಲು: ಶ್ರೀ ಬಿ.ಹೆಚ್. ವಕೀಲರಿಂದ:**

1. ನಿಮ್ಮ ಸಾಕ್ಷಿ ಪ್ರಮಾಣ ಪತ್ರದಲ್ಲಿ ಬರೆದ ವಿಷಯಗಳ ಬಗ್ಗೆ ಮಾಹಿತಿ ಇದೆಯಾ ಎಂದರೆ ಸಾಕ್ಷಿಯು ನನಗೆ ಗೊತ್ತಿಲ್ಲ ಎನ್ನುತ್ತಾರೆ. ಈ ದಾವೆಯನ್ನು ನಾವು 6 ಜನ ವಾದಿಯರು ಪ್ರತಿವಾದಿಯರ ವಿರುದ್ದ ಮನೆ ಮತ್ತು ಖುಲ್ಲಾ ಜಾಗ ಪ್ಲಾಟ್ ನಲ್ಲಿ ಭಾಗ ಬೇಕು ಅಂತಾ ಸಲ್ಲಿಸಿರುತ್ತೇವೆ. ದಾವಾ ಜಮೀನು ಚಿಂಚೋಡಿ ಗ್ರಾಮದ ಸ ನಂ 73 ರಲ್ಲಿ ಬರುತ್ತದೆ. ದಾವೆಯ ಹೊಲ ನನ್ನ ತಾಯಿ ಹೆಸರಿನಲ್ಲಿರುತ್ತದೆ. ಅದಕ್ಕೂ ಪೂರ್ವದಲ್ಲಿ ದಾವಾ ಜಮೀನು ನನ್ನ ತಂದೆಯ ಹೆಸರಿನಲ್ಲಿತ್ತು. ದಾವಾ ಪ್ಲಾಟಿನ ನಂಬರ್ ನನಗೆ ಗೊತ್ತಿಲ್ಲ. ದಾವಾ ಪ್ಲಾಟ್ ನಂಬರ್ 494/1, ವಿಸ್ತೀರ್ಣ 21X30 ಅಡಿ ಮತ್ತು ಪ್ಲಾಟ್ ನಂಬರ್ 474/3, ವಿಸ್ತೀರ್ಣ 60X28 ಅಡಿ ಇವುಗಳನ್ನು 2ನೇ ಪ್ರತಿವಾದಿಯ ಗಂಡ ದುರಗಪ್ಪ ಅವರು ಖರೀದಿ ಮಾಡಿದಂತಹ ಸ್ವಯಾರ್ಜಿತ ಆಸ್ತಿಗಳಾಗಿದ್ದು ನಿಮ್ಮ ತಂದೆಯ ಪಿತ್ರಾರ್ಜಿತ ಆಸ್ತಿಗಳಾಗಿರುವುದಿಲ್ಲ ಎಂದರೆ ಸರಿಯಲ್ಲ. ದಾವಾ ಎರಡು ಪ್ಲಾಟ್‌ಗಳನ್ನು ದುರಗಪ್ಪ ಖರೀದಿ ಮಾಡಿರುವಂತಹ ಸ್ವಯಾರ್ಜಿತ ಆಸ್ತಿಗಳಾಗಿದ್ದು ನಿಮಗೆ ಭಾಗ ಕೇಳುವ ಅಧಿಕಾರ ಇರುವುದಿಲ್ಲ ಎಂದರೆ ಸರಿಯಲ್ಲ. ದಾವಾ ಪ್ಲಾಟ್ ಗಳನ್ನು ನನ್ನ ತಂದೆ ಯಾರ ಕಡೆಯಿಂದ ಖರೀದಿ ಮಾಡಿದ್ದಾರೆ ಎಂದು ನನಗೆ ಗೊತ್ತಿಲ್ಲ.

ಮುಂದುವರಿದ ಪಾಟೀಸವಾಲಿಗೆ ಸಮಯವಕಾಶ ಕೋರಿದ್ದರಿಂದ ಮುಂದೂಡಲಾಯಿತು.

(ಸಾಕ್ಷಿಯು ನೀಡಿರುವ ಸಾಕ್ಷವನ್ನು ಯಥಾವತ್ತಾಗಿ ನನ್ನ ಉಕ್ತ ಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.)

**ಓ.ಹೇ.ಕೇ.ಸರಿ ಇದೆ.**

ಸಹಿ**/-**

ಸಿವಿಲ್ ಜಡ್ಜ್ & ಜೆ.ಎಂ.ಎಫ್.ಸಿ.

ದೇವದುರ್ಗ